ಓ ಎಸ್ ಃ148/2016

ಪಿ. ಡಬ್ಲ್ಯೂ 1

ಸಾಕ್ಷಿಯನ್ನು ದಿಃ 11.09.2019 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಎ ಪಿ ಎಸ್ ವಕೀಲರಿಂದಃ**

ಚಿನ್ನಸ್ವಾಮಿ ಬಿನ್ ಮಾರಯ್ಯ ಅಲಿಯಾಸ್ ಮರಿಗೌಡ, ವಯಸ್ಸು 46 ವರ್ಷ, ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ದಿಃ17.03.1965 ರ ಒಂದು ನೋಂದಾಯಿತ ಕ್ರಯಪತ್ರದ ಮೂಲ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು, ನದಿಃ19.03.2015 ರ ಒಂದು ದಾನಪತ್ರದ ಮೂಲ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.2 ಎಂದು, ಸರ್ವೆ ನಂ 243/2 ಎ, 2 ಬಿರ ಆರ್ ಟಿ ಸಿ ಯನ್ನು ಮತ್ತು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು, ಸರ್ವೆ ನಂ. 243/2 ಎ 2 ರ ಆರ್ ಟಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.4 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ 6 ಭಾವಚಿತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.5 ರಿಂದ 10 ಎಂದು, ಒಂದು ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.11 ಎಂದು, ಸರ್ವೆ ನಂ. 243/2 ಎ,2 ಬಿ ಆಸ್ತಿಗೆ ಸಂಬಂಧಪಟ್ಟಂತೆ ಎಂದು ನಕ್ಷೆಯ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ.12 ಎಂದು ಗುರುತುಪಡಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು

ಜೆ.ಎಂ.ಎಫ್.ಸಿ. ತಿ.ನರಸೀಪುರ